ಹಿಂದಿನಿಂದ

ಮಂಜು ಮನೆ, ಬೆಂಗಳೂರು. 19.05.2000

ಬೆಳಗೆರೆ ಕೃಷ್ಣಶಾಸ್ತ್ರಿಗಳೊಡನೆ.

ಎಲ್ಲಿ ಪ್ರಶ್ನೆ ಉಂಟೋ ಅಲ್ಲಿಯೇ ಉತ್ತರವೂ ಉಂಟು. ಪ್ರಶ್ನೆ ಒಳಗಿಂದ ಬರ್ತದೆ. ಉತ್ತರವೂ ಒಳಗೇ ಉಂಟು. ಉತ್ತರ ಮೊದಲು, ಆಮೇಲೆ ಪ್ರಶ್ನೆ ಬರೋದು. ಹಾಗಾಗಿ ಉತ್ತರವು ಉಂಟಲ್ಲಿ. ಆ್ಞಂ. ಇದಕ್ಕೆ ದಾರಿ ತೋರಿಸ್ಬೇಕೋ? ಬ್ಯಾಡ ಅಲ್ಲಾ.

ಒಬ್ಬರು – ತೋರಿಸಿ ಅಜ್ಜಾ.

ಅಜ್ಜ – ಇಲ್ಲಪ್ಪ.

ಒಬ್ಬರು – ತೋರಿಸಿ.

ಅಜ್ಜ – ಆ ಮಾಡುವವನು ಒಳಗೇ ಇದ್ದಾನಲ್ಲ . . . ಇದನ್ನ ಕೃತಿಯ ರೂಪಕ್ಕೆ ತಂದುಬಿಟ್ರೆ ಮುಗೀತಪ್ಪ. "ಯಾರಿಗೆ ಯಾರು ಉಂಟು" ಅಂತ್ಹೇಳಿ ಭಜನೆ ಅಲ್ಲಾ.

ಆರತಿ – "ಯಾರಿಗೆ ಯಾರೂ ಮತ್ತಿಲ್ಲ" ಅಂತ.

ಅಜ್ಜ – ಹಾಗಾದ್ರೆ ನಮ್ಮ ಸಂಸಾರ ? (ಎಲ್ಲರ ನಗು)

ಅಜ್ಜ – ನಮಗದೆಲ್ಲ ಉಂಟಲ್ಲ. ಅಲ್ಲಿ ಭಜನೆಯಲ್ಲಿ ಹೇಳ್ತದೆ "ಯಾರಿಗೆ ಯಾರೂ ಮತ್ತಿಲ್ಲ" ಅಂತ.

ಆರತಿ – "ನಡು ದಾರಿಯ ಒಳಗೆ ಕೈಯ್ಯ ಬಿಡುವರೆ ಎಲ್ಲ" ಅಂತ ಹೇಳುತ್ತೆ.

ಒಬ್ಬರು – ಭಗವಂತ ಒಬ್ಬನೆ ಎಲ್ರಿಗೂ ಅಂತ.

ಅಜ್ಜ – ಹೌದಾ. ಅಷ್ಟೆಲ್ಲ ಗೊತ್ತುಂಟು ನಿಮಗೆಲ್ಲ ಅಲ್ಲಾ. (ಎಲ್ಲರ ನಗು)

ಅಜ್ಜ – ನೀವು ಒಬ್ಬೊಬ್ಬರು ಉಪನ್ಯಾಸ ಕೊಟ್ರೆ ಮತ್ತೆ ಸಮಯ ಸಾಕಾಗೋದಿಲ್ಲ. ಆ್ಞಂ. ಅಷ್ಟು ಸಾಹಿತ್ಯಗಳು ಉಂಟು ಅಲ್ಲಾ. ನಮ್ಮಲ್ಲಿ ಅದು ಉಂಟು ಅಂತ ಆದ್ರೆ ಕೃತಿಯಲ್ಲಿ ಬರ್ಲಿ. ಶರಣಾಗತಿ ಅಂದ್ರೆ ಏನು. ಎಲ್ಲವು ನೀನೇ. ಎಲ್ಲವು ನೀನೇ ಅಂತ ಹೇಳಿದ್ರೆ ಮತ್ತೆ 'ನಾನು' ಬಿಟ್ಟುಬಿಡಿ ಅಂತ್ಹೇಳಿ (ಜೋರಾಗಿ) ಹೋಗ್ಲಿ. ಅವನದ್ದೆ ಅಲ್ವಾ. ಶರಣಾಗತಿ. ಅವನದ್ದಾಗಿರುವಂಥಾದ್ದು ಅದು ಮಾತ್ರ. ಬಾಕಿ ಎಲ್ಲವನ್ನು ಬಿಡೋದು. ಅದಾಗೋದಿಲ್ಲ. ತನ್ನದನ್ನು ಬಿಡುವಂಥಾದ್ದ್ಯಾವ್ದು ಶರಣಾಗತಿಯಲ್ಲಿ. ಒಂದೇ. ಅವನಿಗೆ ಅಲ್ಲಿ ಸ್ಥಳಾವಕಾಶವನ್ನು ಮಾಡಿ ಕೊಟ್ಟ ಹಾಗಾಯ್ತು. ಆಗ ಇವ ಹೋದಮೇಲೆ ಅವನೇ ಬರೋದು. ಆ್ಞಂ.

ಒಬ್ಬರು – ನಾವೆಲ್ಲಾ ಇಲ್ಲಿ ಹೌಸ್ ಫುಲ್ ಅಂತ ಬೋರ್ಡ್ ಹಾಕಿಬಿಟ್ಟಿದ್ದೇವೆ. ಜಾಗ ಇಲ್ಲ ಅಂತ.

ಅಜ್ಜ – ಹಾಂ. ಖಾಲಿ ಮಾಡ್ಬೇಕಾದ್ರೆ ಶರಣಾಗತಿ ಒಂದೇ ದಾರಿ. ನೋಡಿ ಅಲ್ಲಿ ಮತ್ತೆ ಇರುವಂಥಾದ್ದು. ಮೈಯನ್ನು ಮರೆತುಬಿಡಬೇಕು. ಮರೆತು ಬಿಡಬೇಕಾದ್ರೆ ಆ ಜೀವಾತ್ಮವನ್ನು ಎಚ್ಚರಗೊಳಿಸಿ ಸ್ಫೋಟಗೊಳಿಸುವಂಥಾದ್ದು.

ವ್ಯವಹಾರವನ್ನು ಬಿಟ್ಟು ಪಾರಮಾರ್ಥ ಎಂಬುದು ಇಲ್ಲ. ಇದು ಬೇರೆ ಅದು ಬೇರೆ ಅಂತ ಇದ್ರೆ ಇದು ಮುಗಿಯುವುದು ಯಾವಾಗ. ಈ ವ್ಯವಹಾರ ಮುಗಿಲಿಕ್ಕುಂಟ? ಮುಗಿಯೋದೇ ಇಲ್ಲ. ಹಾಗಾದ್ರೆ ಇದರ ಜೊತೆ

ಜೊತೆಯಲ್ಲಿ ಅದು ಬಂದಾಗ . . .  ಬೇರೆ ಬೇರೆ ಆದ್ರೆ ಆಗೋದಿಲ್ಲ. ದ್ವಂದ್ವ ಆಯ್ತು. ದ್ವಂದ್ವಾತೀತಕ್ಕೆ ಹೋಗ್ಬೇಕು ನಾವು. ಹಾಂ. ಭಜನೆ ಮಾಡಿ.

ಆರತಿ – "ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ . . . " ಹಾಡಿದರು.
"ಅರಿತೆ ನಾನು ಅರಿತೆ ನಾನು ನಿಜದ ನೆಲೆಯನರಿತೆನು . . . " ಹಾಡಿದರು.

ಅಜ್ಜ – ಅಲ್ವಾ. ನಮ್ಮನ್ನು ನಾವು ಅರಿಲಿಕ್ಕೆ ಪ್ರಯತ್ನ ಮಾಡ್ಬೇಕು. ಆದ್ರೆ ಪ್ರಯತ್ನ ಮಾಡಿ ಆದ್ರೆ ನಾನು ಅರಿತಿದ್ದೇನೆ ಎಂಬ ಭಾವನೆ ಬಿಡಿ. ಅದಿದ್ರೆ ಸ್ವಲ್ಪ ತೊಂದ್ರೆ ಕೊಡ್ತದೆ. ನಾನು ಅರಿತಿದ್ದೇನೆ ಅಂತ ಹೇಳುವಾಗ ಅಲ್ಲಿ ಅಡ್ಡ ಬರ್ತದೆ. ಅಷ್ಟೆ (ಎರಡೂ ಕೈಯನ್ನು ಮೇಲೆ ಮಾಡಿ) ಇಷ್ಟೆ. ಅರ್ಪಣೆ. ತನ್ನನ್ನು ತಾನು ಅರ್ಪಿಸುವಂಥಾದ್ದು. ದೇಹವನ್ನಲ್ಲ. ದೇಹದಲ್ಲಿರುವವನನ್ನು ಅರ್ಪಿಸುವಂಥಾದ್ದು. ಸಾಧ್ಯವೋ? ಅವನಿಗೆ ಜಾಗ ಮಾಡಿ ಕೊಡ್ಬೇಕಾದ್ರೆ ಅರ್ಪಣೆ ಆಗ್ಬೇಕು. ಆಗ ಅವ ಬಂದೇ ಬಂದ. ಆ್ಂ. ತನ್ನನ್ನು ತಾನು ಅರ್ಪಣೆ ಮಾಡಿಕೊಳ್ಳುವಂಥಾ ವಿಧಾನ ಇದು. ಮತ್ತೆ ಏನೂ ಇಲ್ಲ ಹೋಯ್ತು. ಮತ್ತೆ ಮುಂದೆ (ನಗುತ್ತಾ) ನೀನೆ. ಎಲ್ಲವೂ ನೀನೆ. ಹಾಗಾದ್ರೆ ನಾನು? ಪ್ರತ್ಯೇಕ ಉಂಟಾ? ಅವನಿಂದ ಪ್ರತ್ಯೇಕವಾಗಿ 'ನಾನು' ಉಂಟಾ? ಇಲ್ಲ ಅಲ್ವಾ. ನಮಗೆ ಮೋಕ್ಷ ಬೇಕಾ ಇನ್ನು.

ಎಲ್ಲರು – ಬೇಡ.

ಅಜ್ಜ – ಹಾಂ. (ಎಲ್ಲರ ನಗು)

ಅಜ್ಜ – ಇದ್ದಲ್ಲೆ ಉಂಟು. ಇದ್ದಲ್ಲೇ ಎಲ್ಲವೂ ಉಂಟು.

*****

ಆನಂದ ಕುಟೀರದ ವಾರ್ಷಿಕೋತ್ಸವ, ಪುತ್ತೂರು. 07.05.2000

ಅಜ್ಜನ ಮಾತು.

ನಮ್ಮ ಜೀವನವೇ ಒಂದು ಸಂದೇಶ. ಹಾಗಿರುವಾಗ ಇದರ ಮೇಲೆ ಏನು ಮಾತುಗಳು ಅಂತ್ಹೇಳಿ ಇಲ್ಲಿ ಬರ್ತದೆ. ಇದನ್ನು ಮಾತುಗಳ ಮೂಲಕ ಹೇಗೆ ಹೇಳೋದು ಅಂತ್ಹೇಳಿ. ಸ್ವಲ್ಪ . . . ಹೇಳಿಕ್ಕೆ ಕಷ್ಟ ಆಕ್ತದೆ. ಮೌನದಲ್ಲೇ ಸಂದೇಶ. ಜೀವನವೇ ಸಂದೇಶ.

ವರದಾಚಾರ್ಯ – ಗುರೋಸ್ತು ಮೌನಂ ವ್ಯಾಖ್ಯಾನಂ, ಶಿಷ್ಯಾಸ್ತು ಛಿನ್ನ ಸಂಶಯಾಃ

ಅಜ್ಜ – ಇಲ್ಲಿ ಮಾತುಗಳು ಬರ್ತಾ ಇಲ್ಲ. ಸ್ವಲ್ಪ ದೇಹಕ್ಕೆ ಅನಾರೋಗ್ಯ ಇದೆ. ಮಾತಾಡ್ಲಿಕ್ಕೆ ಆಗೋದಿಲ್ಲ.

(೧/೨ ಗಂಟೆ ನಂತರ ಕಾರ್ಯಕ್ರಮದ ಕೊನೆಯಲ್ಲಿ)

ಅಜ್ಜ – ಸರ್ವ ಧರ್ಮ ಸಮನ್ವಯ ಸಿದ್ಧಾಂತವೇ ಸನಾತನ ಧರ್ಮ. ಅಂದ್ರೆ ಸನಾತನ ಧರ್ಮ ಅಂದ್ರೆ ಏನು? ಮಾನವ ಧರ್ಮ. ಮಾನವ ಧರ್ಮ ಅಂದ್ರೆ ಏನು ಎಂಬುದನ್ನು ಮುಂದಿನ ವಿಚಾರದಲ್ಲಿ ನಾವು ಮಾತಾಡುವ. ತುಂಬಾ ಉಂಟು. ಅತಿ ಸುಲಭದಲ್ಲಿ ಅರ್ಧ ಇಂಚಿನ ಒಳಗೆ ಉಂಟದು. ವಿವರಿಸ್ಲಿಕ್ಕೆ ಮೂರು ದಿವ್ಸ ಬೇಕು. ಧರ್ಮ ಅಂದ್ರೆ ಏನು? ನಮ್ಮ ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ಬರುವಂಥಾದ್ದೇ ಧರ್ಮ. ಅದಕ್ಕೆ ವಿರೋಧವಾಗಿ ಬಂದ್ರೆ ಅದು ಧರ್ಮವಲ್ಲ. ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಬಂದವನೇ, ಧರ್ಮವನ್ನು ಕಾಪಾಡತಕ್ಕವನು. ಅದು ನಮ್ಮಲ್ಲಿ ಪ್ರತಿಯೊಬ್ಬನಲ್ಲೂ ಉಂಟು. ಅದು ಅಡಗಿ ಉಂಟು. ಅದನ್ನು ಕಾಣಿಸುವಂಥಾದ್ದೇ ನಮ್ಮ ಕೆಲಸ ಅಂತ್ಹೇಳಿ ನಮಗೆ ಒಳಗಿನಿಂದ ಬರ್ತದೆ. ಆ್ಂ. ಅದಕ್ಕಾಗಿ ಒಳಗೆ ತುಂಬ ಕೆಲಸ ಮಾಡ್ತಾ ಉಂಟು. ಒಂದು ವಾರದ ಒಳಗೆ ನಿಲ್ಲಿಕ್ಕಾಗೋದಿಲ್ಲ. ಮುಂದೆ ಮಾತಾಡುವ. ಪ್ರತಿಯೊಬ್ಬರೂ ಆ ಸತ್ಯವನ್ನು ಕಾಣಬೇಕು. ಕಾಣಬೇಕು ಅಂತ್ಹೇಳಿ. ಈಗ ಜಗತ್ತಿನಲ್ಲಿ ಏನಾಗಿದೆ ಅಂತ್ಹೇಳಿದ್ರೆ, ಅಸತ್ಯವನ್ನೂ ಸತ್ಯ ಅಂತ್ಹೇಳಿ ಗ್ರಹಿಸಿ ಜನ್ರು ಪೂಜೆ ಮಾಡ್ತಾರೆ. ಇನ್ನು ಯಜ್ಞ ಮಾಡ್ತಾರೆ. ಏನೆಲ್ಲ ಮಾಡ್ತಾರೆ. ಆದರೆ . . .  ನೋಡಿ ಅಸತ್ಯದ ಮಧ್ಯದಲ್ಲಿ ಸತ್ಯವು ಅಡಗಿರುತ್ತದೆ. ನೋಡಿ ಅಸತ್ಯದ

ಮಧ್ಯದಲ್ಲಿ ಅಡಗಿರುತ್ತದೆ ಸತ್ಯವು. ಹೊರಗೆ ಕಾಣಿಸುವಂಥಾದ್ದು ಸತ್ಯ ಅಂತ ಹೇಳಿದ್ರೆ . . . ಅದಕ್ಕೆ ನಮ್ಮ ನಮಸ್ಕಾರ. ಅದಾಗೋದಿಲ್ಲ. ಹೊರಗೆ ಕಾಣುವುದು ಸತ್ಯವಲ್ಲ. ಅಲ್ಲಿಯೇ ಒಂದರ್ಧ ಇಂಚು ಒಳಗೆ ಹೋದರೆ ಅಲ್ಲಿ ಧರ್ಮವಿದೆ. ಸತ್ಯವಿದೆ. ಅದುವೇ ದೇವರು. ಸ್ವಲ್ಪ ಸಮಯ ನಿಮ್ಮ ತಲೆ ಬಿಸಿ ಮಾಡಿದ ಹಾಗಾಯ್ತು ನಾವು . . . ಧರ್ಮ ಎಂಬುದು ಅಲ್ಲಿದೆ. ಅಸತ್ಯವನ್ನು ಸತ್ಯ ಅಂತ್ಹೇಳಿ ನಂಬುವ ಕಾಲ ಇದು. ಅದನ್ನು ಹೋಗಲಾಡಿಸಲಿಕ್ಕಾಗಿ ಒಬ್ಬನು ಬಂದಿದ್ದಾನೆ . . . ಎಲ್ಲಿಯೋ ಅವನು ಮುಂದೆ ಇತ್ಲಾಗೆ ಬರ್ಲಿಕ್ಕೂ ಸಾಕು. ಆವಾಗ ನೋಡುವ. ಆ್ಞಂ.

*****

ಆನಂದ ಕುಟೀರದ ವಾರ್ಷಿಕೋತ್ಸವ, ಪುತ್ತೂರು. 07.05.2002

ತೊಳ್ನಾಡಿ – ನೀವೊಂದೆರಡು ಮಾತಾಡಿ ಅಜ್ಜ.

ಅಜ್ಜ – ಮಾತನಾಡುವವ ಯಾರು? ಇಲ್ಲಿಂದ ಮಾತುಗಳು ಬರ್ತದೆ. ಇಂಥವನು ಮಾತ್ನಾಡ್ತಾನೆ ಅಂತ ಹೇಳ್ಳಿಕ್ಕೆ ಇಲ್ಲಿ ಯಾರೂ ಇಲ್ಲ. ಕರ್ತೃತ್ವವಿಲ್ಲ, ಸಂಕಲ್ಪವಿಲ್ಲ, ಕರ್ಮಗಳಿಲ್ಲ. ಯಾವುದೂ ಇಲ್ಲ.

ತೊಳ್ನಾಡಿ – ಮತ್ತೇನಿದೆ.

ಅಜ್ಜ – ಉಂಟಾಗದೇ ಇರುವಂಥಾದ್ದು ಯಾವುದುಂಟೋ ಅದು ಯಾವಾಗಲೂ ಉಂಟು. ಅದು ಉಂಟು ಅಂತ ಹೇಳುವವನೂ ಕೂಡ ಇಲ್ಲ ಇಲ್ಲಿ. ಅದನ್ನ ಅರ್ಥವಿಸಿಕೊಳ್ಬೇಕಾಕ್ತದೆ. ಅಂತು ಆಶ್ಚರ್ಯ. 'ನಾನು' ಅಲ್ವಾ! ಯಾರದು? ಅವನು ಅವನ ಶೋಧನೆಗೆ ಹೊಂಟಾಗ, ಆ 'ನಾನು'ವಿನ ಅಸ್ತಿತ್ವ ಇಲ್ಲದೇ ಆಯಿತು. ಆದ್ರೂ ಮಾತುಗಳು ಬರ್ತದೆ. ಒಂದು ಟೇಪ್ರೆಕಾರ್ಡರಿನಲ್ಲಿ ಒಬ್ಬನ ಮಾತುಗಳು ಸಂಗ್ರಹವಾಗಿ ಅದನ್ನು ಹೊರಗೆ ಹಾಕ್ತದೆ. ಅದೇ ರೀತಿ ಮೆದುಳಿನಲ್ಲಿ ನರಗಳಲ್ಲಿ ಕೆಲವು ಮಾತುಗಳೆಲ್ಲಾ ಟೇಪಾಗಿದ್ದು ಅದು ಅಭ್ಯಾಸ ಬಲದಿಂದ ಹೊರಗೆ ಹಾಕ್ತಾ ಉಂಟು. ಯಾವುದೋ ಒಂದು ಅವ್ಯಕ್ತ ಶಕ್ತಿ ಉಂಟು. ಅದು ಮನಸ್ಸಿಗೆ ಪ್ರೇರಣೆ ಕೊಡ್ತದೆ. ಅದು ಬಾಹ್ಯ ಇಂದ್ರಿಯಗಳ ಮೂಲಕ ಹೊರಗೆ ಹಾಕ್ತಾ ಉಂಟು. ಮೈಕಿಗೆ ಮಹತ್ವ ಉಂಟೋ? ಆ ಮೈಕಿನ ಮೂಲಕ ಯಾರು ಮಾತ್ನಾಡ್ತಾರೋ ಅವನಿಗೆ ಮಹತ್ವ. ಅದೇ ರೀತಿ ದೇಹದ ಒಳಗೆ ಇರ್ತಕ್ಕಂಥ ಆ ಶಕ್ತಿ ಅಂದ್ರೆ ಆ ಬೆಳಕು ಅದಕ್ಕೆ ಮಹತ್ವ. ಅದು, ಪ್ರತಿಯೊಂದು ದೇಹದಲ್ಲೂ ಇರುವಂಥಾದ್ದು. ಆದ್ರಿಂದ ಪ್ರತಿಯೊಬ್ಬರೂ ನಿಮ್ಮಲ್ಲಿ ನೀವೆ ಶೋಧನೆ ಮಾಡಿ ಆ ವಿಚಾರಗಳನ್ನು ಕಂಡುಕೊಂಡಾಗ ಅದು . . . ಅ ಆ್ಞಂ. ಮಾತುಗಳು ಬರ್ತಾ ಇಲ್ಲ ಹೇಳ್ಳಿಕ್ಕೆ . . .

ನಮ್ಮನ್ನು ನಾವೇ ಶೋಧನೆ ಮಾಡಿಕೊಂಡಾಗ ಆ ಶೋಧನೆ ಮಾಡುವವನು ಇಲ್ಲದೇ ಆದಾಗ ಸಂಪೂರ್ಣ ಶಾಂತಿ ಅಲ್ಲಿ. ಅವ ಸ್ವತಂತ್ರನಾದ. ಅಷ್ಟರವರೆಗೆ ಯಾರೂ ಸ್ವತಂತ್ರರಲ್ಲ. ಆಸ್ತಿ, ಬದುಕು, ಹಣ, ಸಂಸಾರ ವಿಶಿಷ್ಟವಿದ್ದು. ಎಲ್ಲಾ ಇದ್ದಾಗ್ಲೂ ಕೂಡ ಅವ ಸ್ವತಂತ್ರನಲ್ಲ. ಸ್ವತಂತ್ರನಾಗ್ಲಿಕ್ಕೆ ಅವ ಖಾಲಿ ಆಗ್ಬೇಕು. ಜೀವಾತ್ಮನು ಕರ್ಮ ಮತ್ತು ಜ್ಞಾನದಿಂದ ತನ್ನ ಅಸ್ತಿತ್ವವನ್ನು ಕಳಕೊಂಡಾಗ ಸ್ವತಂತ್ರನಾದ. ಹಾಗೆ ಹೇಳಿದ್ರೆ ಅರ್ಥವೇನು? ದ್ವಂದ್ವಕ್ಕೆ ಒಳಪಟ್ಟಾಗ ಅಲ್ಲಿ ಶಾಂತಿ ಇಲ್ಲ. ದ್ವಂದ್ವಾತೀತವಾದ ಬದುಕಿಗೆ ಹೋದಾಗ ಅಲ್ಲಿ ಶಾಂತಿ ಉಂಟು. ಆ ದ್ವಂದ್ವಾತೀತವಾದ ಬದುಕಿಗೆ ಹೋಗಬೇಕಾದ್ರೆ, ನಾವು ಸಾಯಲೇ ಬೇಕು. ಇದರ ಅರ್ಥವೇನಪ್ಪ. ಏನು ಆತ್ಮಹತ್ಯೆಯ. ಆ್ಞಂ. ಅಲ್ಲ. ಸಾವು ಅಂದ್ರೆ ಅರ್ಥವೇನು? ಇಡೀ ಜೀವಮಾನಕಾಲದಲ್ಲಿ ನಾವು ಅಭ್ಯಾಸ ಮಾಡಬೇಕಾದ್ದು ಸಾಯುವಂಥಾ ಒಂದು ಕಲೆಯನ್ನು. ಬಾಕಿ ಎಲ್ಲಾ ಕಲೆಯನ್ನು ಎಲ್ಲರೂ ಅಭ್ಯಾಸ ಮಾಡಿದ್ದಾರೆ, ಉತ್ತೀರ್ಣರಾಗಿದ್ದಾರೆ. ಇನ್ನು ಏನೆಲ್ಲಾ ಆಗಿದ್ದಾರೆ. ಆದ್ರೆ ಸಾಯುವ ಕಲೆಯನ್ನು . . . ಸಾವಂದ್ರೆ ಹೆದರಿಕೆ, ಭಯ ಬರ್ತದೆ. ಹಾಗಾದ್ರೆ ಅದನ್ನು ಕಲಿಯೋದು ಹ್ಯಾಗೆ. ಸಾವಂದ್ರೆ ಈ ಲೋಕಾರೂಢಿಯ ಸಾವು ಸಾವಲ್ಲ. ದೇಹದಿಂದ ಜೀವಾತ್ಮನು ಹೊರಟು ಹೋದ. ಹಾಗಾದ್ರೆ ಸಾವಾಯ್ತು. ಸಾವಾದ್ರೆ ಅವ ಪುನಃ ಜನ್ಮಕ್ಕೆ ಬರ್ತಾನಾ? ಇಲ್ಲ. ಹಾಗಾದ್ರೆ ಆ ಬರುವವನಿಗೆ ಹೋಗುವವನಿಗೆ ಸಾವು ಸಂಭವಿಸಿದಾಗ ಅದು ನಿಜವಾದ ಸಾವು. ಹೋಗುವವನು ಬರುವವನು ಯಾರು? ಆ ಜೀವಾತ್ಮ ಜೀವನಿಗೆ ಸಾವು ಸಂಭವಿಸಿದಾಗ . . . ಅಲ್ಲ, ಜೀವಾತ್ಮ ಅನ್ನುವಲ್ಲಿ ಆತ್ಮನಿಗೆ ಸಾವಿಲ್ಲ. ಆದ್ರೆ ಆವರಣ ರೂಪದಲ್ಲಿ ಒಂದು ಶಕ್ತಿ ಉಂಟು. ಅದಕ್ಕೆ ಸಾವು ಸಂಭವಿಸಿದಾಗ, ನಿಜವಾದ ಸ್ವತಂತ್ರನಾದ. ಅಂದ್ರೆ ಆತ್ಮವೇ ಆದ. ಇದು ಎಲ್ಲರಿಗೂ ಸಾಧ್ಯ ಉಂಟು. ಪ್ರತಿಯೊಬ್ರು ಅಂತರ್ಯದಲ್ಲಿ ಶೋಧನೆ ಮಾಡುವಂಥಾ ಪ್ರಸಂಗ ಒದಗಿ ಬರ್ಲಿ ಎಲ್ರಿಗೂ.

ಅಸ್ತಿತ್ವವನ್ನು ಕಳಕೊಳ್ಳೊದು ಎಂಬುದರ ಅರ್ಥವೇನಪ್ಪ. ಕಳಕೊಳ್ಳಿಕ್ಕಾಕ್ತದ ಅಸ್ತಿತ್ವವನ್ನು? ಆಗೋದೇ ಇಲ್ಲ. ಅಲ್ವಾ. ಹಾಗಾದ್ರೆ ಅಸ್ತಿತ್ವ ಕಳಕೊಳ್ಳುವುದೂ ಅಂದ್ರೇನು? ಅಸ್ತಿತ್ವವನ್ನು ನಾವು ಉಂಟುಮಾಡಿಕೊಂಡದ್ದು. ಅದು ಇಲ್ಲವೇ ಇಲ್ಲ. ಮತ್ತೆ ಅದನ್ನು ಕಳಕೊಳ್ಳುವಂಥಾದ್ದು ಅಂದ್ರೆ ಏನು? ಅದು ಇಲ್ಲವೇ ಇಲ್ಲ.

ಅಕ್ಕಮಹಾದೇವಿ – ಅಸ್ತಿತ್ವ ಐತೆ ಎನ್ನುವ ಭಾವನೆಯನ್ನು ಕಳಕೊಳ್ಳೊದು.

ಅಜ್ಜ – ಹಾಂ. ಆ ಭಾವನೆಯು ಮನದಿಂದ ಹೋಗಬೇಕು. ಅಂದ್ರೆ ಎಲ್ಲ ಖಾಲಿ ಆಗ್ಬೇಕು. ಒಬ್ರು ಕೇಳಿದ್ರು ಖಾಲಿ ಆಗ್ಬೇಕು ಅಂತ ಅಂದ್ರೆ ನಾಳೆಗೆ ಗತಿ ಏನು ಅಂತ್ಹೇಳಿ. (ಎಲ್ಲರ ನಗು). ಛೆ. ಛೆ. ಛೆ. ಅಸ್ತಿತ್ವವನ್ನು ಕಳಕೊಂಡ್ರೆ ನಾಳೆಗೆ ಗತಿ ಏನು ಅಂತ್ಹೇಳಿ. ಇವತ್ತಿನ ಪ್ರಶ್ನೆ ಇಲ್ಲ. ನಾಳೆಗೆ ಗತಿ ಏನು ಅಂತ್ಹೇಳಿ. ನಾಳೆಗೆ ಗತಿ ಸಿಕ್ಕುವಂಥಾದ್ದೇ, ಕಳಕೊಂಡಾಗ ಮಾತ್ರ. ನಾಳೆಗೆ ಗತಿ ಸಿಕ್ಕುವಂಥಾದ್ದು ಅಲ್ಲಿ. ಈ ವ್ಯವಹಾರದಲ್ಲಿ ಎಲ್ಲ ಸಂಗ್ರಹಗಳು ಆಧ್ಯಾತ್ಮದಲ್ಲಿ ಎಲ್ಲ ಸಂಗ್ರಹವಾದದ್ದನ್ನು ಖಾಲಿ ಮಾಡೋದು. ಇಷ್ಟೇ ವ್ಯತ್ಯಾಸ. ವ್ಯವಹಾರಕ್ಕೂ ಪಾರಮಾರ್ಥಿಕಕ್ಕೂ ಇಷ್ಟೇ ವ್ಯತ್ಯಾಸ. ಒಂದು ಸಂಗ್ರಹ ಬುದ್ಧಿ, ಒಂದು ಖಾಲಿ ಮಾಡುವ ಬುದ್ಧಿ. ಇದೆರಡೂ ಕೂಡ ವ್ಯವಹಾರದಲ್ಲಿ ಸಂಭವಿಸುವಂಥಾದ್ದು. ಹಾಗಾದ್ರೆ ವ್ಯವಹಾರವೇ ಪಾರಮಾರ್ಥಿಕ. ವ್ಯವಹಾರವು ಹ್ಯಾಗಿರಬೇಕು ಎಂಬುದು ಸಿದ್ಧಾಂತ ಉಂಟು. ನಾವು ಶ್ವಾಸಗತಿಯನ್ನು ಬಿಡುವಂಥಾದ್ದು ಒಂದು ವ್ಯವಹಾರವೇ ಅಲ್ವಾ. ಇದೇ ರೀತಿ ನಮ್ಮ ಪ್ರತಿಯೊಂದು ವ್ಯವಹಾರವು ಹಾಗಿದ್ದ ಪಕ್ಷದಲ್ಲಿ ಅದು ಪಾರಮಾರ್ಥಿಕಕ್ಕೆ ಹೋಕ್ತದೆ. ಚಿಂತೆಯು ಚಿಂತನೆಯಾದಾಗ ವ್ಯವಹಾರವೇ ಪಾರಮಾರ್ಥಿಕವಾಗುವುದು. ಚಿಂತೆ ಬಂದಾಗ ನಾವು ಪರಮಾತ್ಮನಲ್ಲಿ "ಅಪ್ಪಾ ಚಿಂತೆ ಹೋಗಲಾಡಿಸು" ಅಂತ ಪ್ರಾರ್ಥನೆ ಮಾಡ್ತೇವೆ ಅಲ್ಲಾ. ಇದೇ ನಮ್ಮದು ತಪ್ಪು. ಚಿಂತೆ ಬಂದಾಗ ಯಾವನು ಆ ಚಿಂತೆಯನ್ನು ಸ್ವೀಕಾರ ಮಾಡ್ತಾನೋ ಅವನಿಗೆ ಚಿಂತನೆಯ ದಾರಿ ಸಿಕ್ತದೆ. ಹಾಗಾದ್ರೆ ಚಿಂತೆ ಬಂದಾಗ ಪ್ರತಿಯೊಬ್ರು ಅದನ್ನು ಸ್ವೀಕಾರ ಮಾಡ್ಬೇಕು ಮಾನಸಿಕವಾಗಿ. ದೈಹಿಕವಾಗಿ ರೋಗ ಬಂದ್ರೆ ಅದಕ್ಕೆ ಔಷಧಿ ಡಿಪಾರ್ಟ್‌ಮೆಂಟು ಉಂಟು. ಆದ್ರೆ ಚಿಂತೆ ಬಂದಾಗ ಆ ಚಿಂತೆಯನ್ನು ಸ್ವೀಕಾರ ಮಾಡಿದಾಗ ಮುಂದೆ ಚಿಂತನೆಗೆ ಪ್ರಾರಂಭ. ಅಲ್ಲಿಂದ ಆಧ್ಯಾತ್ಮಿಕ ಜೀವನವು ಪ್ರಾರಂಭ ಆಕ್ತದೆ. ಅದೇ ನಮ್ಮ ಜನ್ಮದ ಉದ್ದಿಶ್ಯವಾಗಿರುವುದು. ಮಾನವ ಜನ್ಮದ ಉದ್ದಿಶ್ಯವೇನು? ಅಲ್ಲಾ ಮಾನವ ಜನ್ಮ . . . ನಾವು ಮಾನವರೇ ಅಲ್ಲ. ಮಾನವ ದೇಹದಲ್ಲಿರುವವರು ನಾವು. ಆ್ಹಂ. ಮಾನವ ದೇಹದಲ್ಲಿರುವವನು ನಾನು ಎಂಬ ವಿಚಾರ ಯಾವಾತನಿಗೆ ಬರ್ತದೋ, ಅವನು ಸ್ವತಂತ್ರನಾಗ್ಲಿಕ್ಕೆ ಅರ್ಹತೆ ಉಳ್ಳವನು. ಈ ದೇಹ ಒಂದು ದಿವ್ಸ ಬಿದ್ದು ಹೋಕ್ತದೆ ಅಲ್ಲಾ. ಅದಕ್ಕೆ ಆವಾಗ ಮಣ್ಣೇ ಗತಿ ಅಲ್ವಾ. ಅದು ಬಿಡಿ. ಅದರಲ್ಲಿ ಇದ್ದವ ಹೊರಟು ಹೋದ. ಯಾಕೆ ಹೊರಟು ಹೋದ? ಅವ ಸ್ವತಂತ್ರನಾಗ್ಲಿಲ್ಲ ಇಲ್ಲಿ. ದೇಹ ಭಾವನೆಯಿಂದ ಅವ ಅಸ್ವತಂತ್ರನಾದ. ಸ್ವತಂತ್ರನಾಗ್ಲಿಕ್ಕೆ ಅವ ಪುನಃ ಹೋದ, ಪುನಃ ಬಂದ, ಪುನಃ ಹೋದ. ಇದೇ ಕೆಲಸ ಆಯ್ತು. ಯಾವ ಜನ್ಮದಲ್ಲಿ ಇವನು ಸ್ವತಂತನಾದ್ನೋ, ಅಂದ್ರೆ ಎಲ್ಲಾ ವಿಷಯಗಳನ್ನು ಖಾಲಿ ಮಾಡಿಕೊಂಡನೋ, ಎಲ್ಲ ಆಸೆಗಳಿಂದ ಬಿಡುಗಡೆ ಹೊಂದಿದಾಗ ಸ್ವತಂತ್ರನಾದ. ಮುಂದೆ ಅವನಿಗೆ ಜನ್ಮಕ್ಕೆ ಬರ್ಲಿಕ್ಕೆ ಆಸ್ಪದವೇ ಇಲ್ಲ. ಯಾರಿಗೆ? ಆ ಒಳಗಿದ್ದವ್ನಿಗೆ. ಮಾನವ ದೇಹದ ಒಳಗೆ ಒಬ್ಬ ಇದ್ದಾನಂತಲ್ಲಾ ಅವನಿಗೆ. ನಾವು ಹೇಳುವಾಗ ಮಾನವ ಅಂತ ಹೇಳ್ಬೇಕಾಕ್ತದೆ. ಅಲ್ಲಾ. ಎಲ್ಲರೊಟ್ಟಿಗಿರುವಾಗ ಅದರೊಟ್ಟಿಗೆ ಸೇರಿಸಿಕೊಂಡು ಹೇಳೋದು . . . ಮಾತುಗಳು ಬರ್ತಾ ಇಲ್ಲ. ಬರ್ಬೇಕಲ್ಲಾ . . . ಆ ಟೇಪ್‌ರೆಕಾರ್ಡರನ್ನು ಹೆಚ್ಚು ಕಮ್ಮಿ ಮಾಡುವ ಒಬ್ಬ ವ್ಯಕ್ತಿ ಬೇಕಲ್ಲ. ಹ. ಹ. ಹ. . . . ಮಾನವ ಜನ್ಮದ ಉದ್ದಿಶ್ಯವೇನು ಎಂಬುದನ್ನು ವಿಚಾರ ಮಾಡುವ ಸಂದರ್ಭದಲ್ಲಿ . . .

ಆಧ್ಯಾತ್ಮಿಕ ಅಂದ್ರೆ ಸಾಧನೆಗೊಳಪಟ್ಟದ್ದಲ್ಲ. ಶೋಧನೆಗೊಳಪಟ್ಟದ್ದು. ಸಾಧನೆಗೊಳಪಟ್ಟದ್ದು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಲಿಕ್ಕೆ ಆಗೋದೇ ಇಲ್ಲ. ಅಲ್ಲಿ ಒಂದು ಉದ್ದಿಶ್ಯ ಉಂಟು. ಒಬ್ಬ ತಪಸ್ಸು ಮಾಡ್ತಾನೆ. ಆ ತಪಸ್ಸಿಗೊಂದು ಉದ್ದಿಶ್ಯ ಉಂಟು. ಯಾವುದು? ಮುಕ್ತಿ ಸಿಕ್ಕಬೇಕು ಅಥವಾ ಪರಮಾತ್ಮನನ್ನು ಕಾಣಬೇಕು ಅಂತ. ಏನೋ ಒಂದು ದೊಡ್ಡ ಉದ್ದಿಶ್ಯವಿಟ್ಟುಕೊಂಡು ಹಿಮಾಲಯದಲ್ಲಿ ತಪಸ್ಸು ಮಾಡುವವರು ಅನೇಕ ಜನ ಇದ್ದಾರೆ. ಇದು ಹಾಗಲ್ಲ. ಇದು ಪ್ರತಿಯೊಂದು ಮನೆಯಲ್ಲಿ, ಸಂಸಾರದಲ್ಲಿರುವಾಗ ಶೋಧನೆ ಮಾಡುವಂಥಾದ್ದು. ತನ್ನನ್ನು ತಾನು ಶೋಧನೆ ಮಾಢುವಂಥಾದ್ದು. ತಾನು ಯಾರು? ದೇಹ ಅಲ್ಲ, ದೇಹದಲ್ಲಿರುವವನು. ಯಾರದು? ಇರುವವನು ಅಂತ ಹೇಳಿಯಾಯ್ತಪ್ಪಾ. ಯಾರದು? ಒಳಗೊಬ್ಬ ಇದ್ದಾನೆ. ಅದಕ್ಕೆ ಈ ಮನಸ್ಸನ್ನು ಒಳಗೆ ಹಾಕಿದಾಗ ಗೊತ್ತಾಕ್ತದೆ. ಮನಸ್ಸನ್ನು ಒಳಗೆ ಹಾಕ್ಲಿಕ್ಕೆ ಈ ಬಾಹ್ಯ ಆಸೆಗಳು ಬಿಡೋದಿಲ್ಲ. ಒಂದು ಆಸೆ ಇದ್ರೆ ಸಾಕು, ಮನಸ್ಸು ಒಳಗೆ ಹೋಗೋದಿಲ್ಲ. ಹಾಗಾದ್ರೆ ಮನಸ್ಸು ಒಳಗೆ ಹೋಗಬೇಕು, ಅವನನ್ನು ಕಾಣಬೇಕು ಎಂಬ ಉದ್ದಿಶ್ಯ ಇದ್ದವನು ಏನ್ಮಾಡ್ಬೇಕು? . . . ನಿದ್ರೆ ಮಾಡುವವನು ಏನ್ಮಾಡ್ಬೇಕು? ಎಲ್ಲಾ ಆಲೋಚನೆಗಳು ಕಮ್ಮಿ ಆದಾಗ ನಿದ್ರೆ ಬಂತು. ನಿದ್ರೆ ಮಾಡ್ಲಿಕ್ಕೆ ಸಾಧನೆ ಮಾಡ್ಬೇಕಾ. ಆ್ಹಂ. ಹಾಗೆ ತನ್ನನ್ನು ತಾನು ಅರಿಲಿಕ್ಕೆ ಸಾಧನೆ ಬೇಡ. ಆಸೆಗಳ ನಿವೃತ್ತಿಯಾದಾಗ ಅಲ್ಲಿಯೇ ಅನುಭವಕ್ಕೆ ಬರ್ತದೆ. ಹ. ಹ. ಹ.

ಒಬ್ಬರು – ಶೋಧನೆನೂ ಒಂದು ಸಾಧನೆ ಅಲ್ವೇ.

ಅಜ್ಜ – ಬನ್ನಿ, ಬನ್ನಿ ಮುಂದೆ ಬನ್ನಿ. ಶೋಧನೆಗೂ ಸಾಧನೆಗೂ ಸ್ವಲ್ಪ ವ್ಯತ್ಯಾಸ ಇಲ್ವಾ. ಶೋಧನೆ ಅಂದ್ರೇನು? ಆಂ. ಸಾಧನೆಗೆ ಇಂದ್ರಿಯಗಳು ಬೇಕು. ಉಪಕರಣಗಳೂ ಬೇಕು. ಈಗ ವಿಜ್ಞಾನಿಗಳು ಶೋಧನೆ ಮಾಡ್ತಾರೆ. ಅವರಿಗೆ ಸಾಮಗ್ರಿಗಳು ಬೇಕು. ಇರುವುದನ್ನು ಪಡೆಯುವುದಕ್ಕೆ ಸಾಧನೆ ಬೇಕಾ? ನೋಡು ಅಂತ್ಹೇಳಿ ನೋಡ್ಲಿಕ್ಕೆ ಒಂದು ಸಾಧನೆ ಬೇಕಾ. ಇಲ್ಲ. ಅದೇ ರೀತಿ ಮನಸ್ಸನ್ನು ಇಷ್ಟೆ . . . ನೋಡಿದರಾಯಿತು. ನಯಾಪೈಸೆ ಖರ್ಚಿಲ್ಲ. ಜನರ ಸಹಕಾರ ಬೇಡ. ಯಾವುದೂ ಬೇಡ. ಅತೀ ಸುಲಭದಲ್ಲಿ ಆಗುವಂಥಾದ್ದು ಯಾವ್ದು, ಶೋಧನೆ.

ಒಬ್ಬರು – ಈ ಮನಸ್ಸನ್ನು ಶೋಧನೆಗೊಳಪಡಿಸ್ಬೇಕಾದ್ರೆ ಈ ಮನಸ್ಸಿಗೊಂದು ಸಾಧನೆ ಬೇಡ್ವೇ.

ಅಜ್ಜ – ಅದು ಅದರ ಸಹಜಾವಸ್ಥೆ. ನಮ್ಮ ಮನಸ್ಸು ಬಾಹ್ಯಮುಖವಾಗಿರುವಾಗ ಅದು ಸಾಧನೆ ಅಂತ ಕಾಣಬಹುದು. ನಿಮ್ಮ ಮನಸ್ಸು ಆಂತರ್ಯಕ್ಕೆ ಹೋಗಲಿ. ಅದು ತನ್ನ ಮೂಲ ಸ್ಥಾನದಲ್ಲಿ ನಿಂತಾಗ ಅದು ತನ್ನಿಂದ ತಾನೆ ಶೋಧನೆ ಮಾಡ್ತದೆ. ಅದಕ್ಕೊಂದು ಪ್ರಯತ್ನ ಅದೂ ಇದೂ ಏನೂ ಬೇಡ. ನೋಡುವ ಪ್ರಯತ್ನ ಮಾಡಿ ಯಾರಾದ್ರು. ಹತ್ತು ವರ್ಷ, ೨೦ ವರ್ಷ ಧ್ಯಾನಮಾಡಿದವರಿದ್ದಾರೆ. ಅವರ ಅನುಭವ ಕೇಳಿ. ಅವರ ಮನಸ್ಸಿಗೆ ಶಾಂತಿಯೇ ಇಲ್ಲ. ಸಾಧನೆಗೆ ಒಂದು ಉದ್ದಿಶ್ಯ ಉಂಟು. ನಾನು ಧ್ಯಾನ ಮಾಡುತ್ತೇನೆ ಅಂತ್ಹೇಳಿ. ಆಂ. ಆ 'ನಾನು' ಯಾವುದು ಅಂತ್ಹೇಳಿ ಶೋಧನೆ ಮಾಡಿದಾಗ ಅಲ್ಲಿ ಧ್ಯಾನವು ಇಲ್ಲ. ಧ್ಯಾನ ಮಾಡುವವನೂ ಇಲ್ಲ. ಧ್ಯಾನ ಮಾಡಲ್ಪಡುವವನೂ ಇಲ್ಲ. ಧ್ಯಾನ ಮಾಡಲ್ಪಡುವವನು ಯಾರು? ಪರಮಾತ್ಮ. ಧ್ಯಾನ ಮಾಡುವವನು ಜೀವಾತ್ಮ. ಇವನೂ ಇಲ್ಲ, ಅವನೂ ಇಲ್ಲ. ಹಾಗಾದ್ರೆ ಮತ್ಯಾವುದು? ಯಾವುದೂ ಯಾವುದೋ ಒಂದು ಉಂಟು. ಅದುವೇ ಜಗತ್ತಿಗೆ ಆಧಾರಸ್ವರೂಪವಾಗಿರುವಂಥಾದ್ದು. ಪರಬ್ರಹ್ಮವಾ (ಪಕ್ಕದವರನ್ನು ನೋಡುತ್ತಾ ಕೇಳಿದರು), ಆತ್ಮವಾ.

ಪಕ್ಕದವರು – ಹೌದು ಪರಬ್ರಹ್ಮ ವಸ್ತು.

ಅಜ್ಜ – ಆತ್ಮವೋ, ಬೆಳಕೋ, ಯಾವುದು ಬೇಕಾದ್ರೂ ಹೇಳಬಹುದು. ಎಲ್ಲವೂ ದೇಹದ ಒಳಗೇ ಉಂಟು. ಮನಸ್ಸು ಹೋಗುವಂಥಾದ್ದು ಹೊರಗೆ. ಅವ ಹೇಗೆ, ಇವ ಹೇಗೆ ಅಂತ್ಹೇಳಿ ಇದೇ ಆಯ್ತು ಮನುಷ್ಯರಿಗೆ. ಇನ್ನೊಬ್ಬರ ಮೇಲೆ ಕಣ್ಣು. ಅವ, ಇವ, ಥತ್. ಇದೆಲ್ಲ ಏನಿದು? ಇವನ ಒಳಗೆ ಇವ ನೋಡ್ಲಿ. ಇದು ಕರ್ಮದಿಂದ ಪರಿವರ್ತನೆಯಾದಾಗ ಸಾಧ್ಯ. ಒಂದು ಕರ್ಮ ವಿಭಾಗ, ಒಂದು ಜ್ಞಾನ ವಿಭಾಗ. ಕರ್ಮಕ್ಕೆ ಸ್ವಲ್ಪ ಸಾಧನೆ ಬೇಕೋ ಏನೋ. ಸ್ವಲ್ಪ ಸಾಧನೆ. ಎಂಥ ಸಾಧನೆ? ಸಾಧನೆ ಮಾಡುವವರ . . . . . ಆಂ. ಅದು ಈ ಇಂದ್ರಿಯದ ಮೂಲಕ ಸಾಧನೆ ಮಾಡುವಂಥಾದ್ದು. ಆ ಸಾಧನೆ ಮಾಡುವ ಇಂದ್ರಿಯವನ್ನೇ ಬಿಟ್ಟು ಹೋಕ್ತಾನೆ. ಮತ್ತೂ ಅವನಿಗೆ ಕೆಲಸ ಉಂಟು. ಇಂದ್ರಿಯಾತೀತವಾದ ಅವ ಕೆಲಸ ಮಾಡ್ತಾನೆ ಅದು ಶೋಧನೆ. ಅದಕ್ಕೆ ಕಣ್ಣು ಬೇಡ, ಕಿವಿ ಬೇಡ, ಮೂಗು ಬೇಡ, ಯಾವುದೂ ಬೇಡ. ಇಂದ್ರಿಯಾತೀತ. ಆಂ. ಅದು ಶೋಧನೆಗೆ ಸಂಬಂಧಪಟ್ಟದ್ದು. ಅಲ್ಲಿ ಮನಸ್ಸು ಇಲ್ಲ. ತನ್ನನ್ನು ತಾನು ಶೋಧನೆ ಮಾಡುವಂಥಾದ್ದು. ಶೋಧನೆ ಮಾಡುವವನು ಪ್ರತ್ಯೇಕವಾಗಿ ಒಬ್ಬ ಇಲ್ಲ. ಶೋಧಕನು ಶೋಧಿಸಲ್ಪಡುವವನೇ ಆಗಿ, ಆ ಶೋಧಿಸಲ್ಪಡುವವನು ಶೋಧಕನಾದಾಗ, ತನ್ನ ಅಸ್ತಿತ್ವವನ್ನು ಕಳಕೊಂಡು ಸ್ವತಂತ್ರನಾಗುತ್ತಾನೆ. ಈ ವಿಚಾರದಲ್ಲಿ ಪ್ರಶ್ನೆ ಕೇಳುವವರಿದ್ರೆ ಕೇಳಬಹುದು. ಉತ್ತರ ಬರ್ತಾ ಉಂಟು. ಆದ್ರೆ ಈಗ ಟೈಂ ಆಯ್ತು. ಒಂದೇ ವಿಚಾರದಲ್ಲಿ ಪ್ರಶ್ನೆ ಕೇಳಬಹುದು.

ಒಬ್ಬರು – ತೇನ ವಿನಾ ತೃಣಮಪಿ ನ ಚಲತಿ, ಅಂದ್ರೆ ಹುಲ್ಲುಕಡ್ಡಿ ಕೂಡ ದೇವರಿಲ್ಲದೆ ಅಲುಗಾಡುವುದಿಲ್ಲ ಅಂತ ಹೇಳ್ತಾರೆ. ಅದಕ್ಕೆ ನೀವೇನು ಹೇಳ್ತೀರಿ. ನೀವು ದೇವರಿಲ್ಲ ಅಂತ ಹೇಳಿದ್ರಲ್ಲಾ.

ಅಜ್ಜ – ನಾವಿದ್ದೇವಲ್ಲ. ದೇವರಿಲ್ಲ ಅಂತ ಹೇಳುವವ ಇದ್ದಾನಲ್ಲ. ಇವನು ಮೊದಲು, ಆಮೇಲೆ ದೇವರು. ದ್ವಂದ್ವ ದೇವರು ಅಂದ್ರೆ. ದ್ವಂದ್ವಾತೀತಕ್ಕೆ ಹೋಗಿ. ದ್ವಂದ್ವಾತೀತದಲ್ಲಿ ದೇವರು ಅಂತ ಹೇಳುವವ ಯಾರು? ನಾನು. ನಾನು ನನ್ನ ಅಸ್ತಿತ್ವವನ್ನು ಕಳಕೊಂಡಾಗ ಅಲ್ಲಿ ಇರೋದು ಯಾರು ಮತ್ತೆ? ಅಲ್ಲಿರೋದು ಯಾರು? ಆ್ಞಂ.

ಒಬ್ಬರು – ಕಳಕೊಂಡಾಗ ಗೊತ್ತಾಗುತ್ತೆ.

ಅಜ್ಜ –  ಏನು? ಏನಪ್ಪ ನೀವು. ಒಂದೇ ಶಬ್ದದಲ್ಲಿ ನಿಂತು ಹೋಕ್ತೀರಿ. ಹಾಗಾಗಿ ನಾವು ಉತ್ತರ ಕೊಡೋದಿಲ್ಲ. ಯಾಕೇಂದ್ರೆ ನಮ್ಮ ನಿಜವಾದ ಉತ್ತರ ಕೊಡುವಾಗ ಅಲ್ಲಿ ಪ್ರಶ್ನೆಯೇ ಇಲ್ಲ.

ಒಬ್ಬರು –  ಕಳಕೊಂಡಾಗ ಗೊತ್ತಾಗಬೇಕಷ್ಟೆ.

ಅಜ್ಜ –  ಯಾವುದನ್ನ ಕಳಕೊಳ್ಳೋದು. ಕಳಕೊಳ್ಳಿಕ್ಕಾಗೋದಿಲ್ಲ. ನಾವು ನೆಗಟೀವ್ ಚಿತ್ರ ಕೊಡೋದು. ಅದನ್ನ ಪಾಜ಼ಿಟೀವ್ ಮಾಡಿಕೊಳ್ಬೇಕು. ಇದ್ರೆ ಅಲ್ವಾ ಕಳಕೊಳ್ಳೊದು. ಇಲ್ಲವೇ ಇಲ್ಲ ಎಂಬುದು ನಿಘಂಟು. ಇದ್ದರೆ ಅದನ್ನ ಕಳಕೊಳ್ಳಬಹುದು ಅಂತ ಕೆಲವು ಜನ ಹೇಳ್ತಾರೆ. ಎಲ್ಲ ತ್ಯಾಗ ಮಾಡಿ ವೈರಾಗ್ಯ ಪಡಕೊಂಡಿದಾರೆ ಅಂತ. ಏನು ವೈರಾಗ್ಯ, ಏನು ತ್ಯಾಗ ಮಾಡಿದ್ದು. ಯಾರದನ್ನು ತ್ಯಾಗ ಮಾಡಿದ್ದು. ಆಸ್ತಿ, ಮನೆ, ಬದುಕು, ಹಣ, ಸಂಸಾರ ಇದೆಲ್ಲ ತ್ಯಾಗ ಮಾಡಿದ್ರಂತೆ, ಅದು ಯಾರದ್ದು. ತ್ಯಾಗ . . .  ಅಂ. ಛೆ. ಕಥೆ ತುಂಬಾ ಉಂಟು. (ಎಲ್ಲರ ನಗು) ಕಥೆ ತುಂಬಾ ಉಂಟು, ಈ ತ್ಯಾಗದ ವಿಚಾರದಲ್ಲಿ. ಯಾರದ್ದದು. ಅವನದ್ದು ಅಂತ್ಹೇಳಿ ಆದ್ರೆ ಅವ ಬಿಟ್ಟು ಹೋಕ್ತಾನ ಅದನ್ನು. ದೇಹವನ್ನೇ ಬಿಟ್ಟು ಹೋದ ಅವ. ಹಾಗಾದ್ರೆ ದೇಹದಲ್ಲಿರುವಾಗ ತ್ಯಾಗ ಮಾಡುವಂಥಾದ್ದು 'ನಾನು'. ಅದನ್ನು ತ್ಯಾಗ ಮಾಡ್ಬೇಕು. ಅಲ್ಲ ಮತ್ತೆ ಬರೋದು ಯಾರು? 'ನೀನು' ಮಾತ್ರ. ಆ್ಞಂ. ನಾನು ಅಂದ್ರೆ ಅವನೆ. ಅವನು ತನ್ನ ಅಸ್ತಿತ್ವವನ್ನು ಕಳಕೊಂಡಾಗ ಸ್ವತಂತ್ರನಾದ. ನೀವು ಯಾವ ಅಸ್ತಿತ್ವ ಹೇಳ್ತೀರಿ. ಬಾಹ್ಯ ಅಸ್ತಿತ್ವವಾ. ಹೋಗಿ ಮುಂದೆ. ಮುಂದೆ ಹೋಗಿಯಪ್ಪ. ಹ. ಹ. ಹ. ಅಂತು ಪ್ರತಿಯೊಬ್ಬರ ದೇಹದಲ್ಲೂ ಒಂದುಂಟು. ಅದು ಜೀವಾತ್ಮನೋ, ಪರಮಾತ್ಮನೋ, ಉಮ್ಮ ಏನೋ ಗೊತ್ತಿಲ್ಲ. ಅದು ತನ್ನ ಅಸ್ತಿತ್ವವನ್ನು ಕಳಕೊಳ್ಳುವುದು ಅಂತ ಲೋಕಾರೂಢಿಗಾಗಿ ಹೇಳುವಂಥಾದ್ದು. ಆದ್ರೆ ಅದಕ್ಕೆ ಅಸ್ತಿತ್ವವೇ ಇಲ್ಲ. ಅದನ್ನೇ ಮಾಯೆ ಅಂತ ಹೇಳ್ತಾರೆ. ಆ ಶಬ್ದವನ್ನು ನಾವು ಉಪಯೋಗಿಸೋದಿಲ್ಲ. ಅದು ದೊಡ್ಡ ಶಬ್ದ ಆಯ್ತು. ಮಾಯೆ ಅಂತೆ ಆ್ಞಂ. 'ನಾನು' ಅದರ ಮೂಲ ಯಾವ್ದು. ಆ ನಾನು ಎಂಬ ಶಬ್ದವು ಯಾವುದಕ್ಕೆ ಅನ್ವಯಿಸ್ತದೆ. ಆ್ಞಂ. ಆ ನಾನುವಿನ ಮೂಲದ್ರವ್ಯ ಯಾವ್ದು? ಆ ದ್ರವ್ಯವನ್ನು ಸ್ಫೋಟಗೊಳಿಸಿದಾಗ ಏನಾಯ್ತು. ಆ್ಞಂ. ಅದು ಇಲ್ಲ. ಅದು ಇಲ್ಲ ಯಾವ್ದು ಇಲ್ಲ ಮತ್ತೆ. ಇದು ಸಾವಿನಾಚೆಗಿನ ದ್ವಂದ್ವಾತೀತವಾದ ಬದುಕು. ಯಾವುದಕ್ಕೆ ಸಾವು? ಆ್ಞಂ. ಸ್ಥೂಲದೇಹಕ್ಕೆ ಸಾವಲ್ಲ, ಸೂಕ್ಷ್ಮಕ್ಕೂ ಅಲ್ಲ. ಕಾರಣದೇಹಕ್ಕೆ ಸಾವು ಸಂಭವಿಸಿದಾಗ ಅದು ನಿಜವಾದ ಸಾವು. ಸ್ಥೂಲವೂ ಇಲ್ಲ, ಸೂಕ್ಷ್ಮವೂ ಇಲ್ಲ, ಕಾರಣವೂ ಇಲ್ಲ. ಈ ಮೂರೂ ದೇಹದ ಒಳಗಿರುವವನು ನಾನು. ಅಂದ್ರೆ ಸ್ವಯಂ ಪ್ರಕಾಶ. ಆ್ಞಂ. ಅಲ್ಲಿ ನಾನು ಅಂತ ಹೇಳುವವನೂ ಇಲ್ಲ. ಅಂದ್ರೆ ಆ ಬೆಳಕಿಗೆ ಸಂಕೇತವಿಲ್ಲ. ಪ್ರಪಂಚಕ್ಕಾಗಿ ಅದನ್ನು ಇಟ್ಟುಕೊಳ್ಳುವಂಥಾದ್ದು, ಅಷ್ಟೆ. ಅಂತೂ ಆನಂದಮಯ ಜೀವನ. ನಾವ್ಯಾರೂ ಮಾನವರಲ್ಲ, ಮಾನವ ದೇಹದಲ್ಲಿರುವ ಆತ್ಮ ಸ್ವರೂಪಿಗಳು. ಆನಂದ ಸ್ವರೂಪಿಗಳು. ಆನಂದ ಪಡೆದು ಬರುವಂಥಾದ್ದಲ್ಲ. ಅದು ಸಹಜಾವಸ್ಥೆ. ಆ ಸಹಜಾವಸ್ಥೆಗೆ ಹೋಗ್ಲಿಕ್ಕೆ ಇದನ್ನು ಕಳಕೊಳ್ಬೇಕು. ಆ್ಞಂ. ಕಳಕೊಳ್ಬೇಕಾದ್ರೆ ಅದು ಇರಲೇ ಇಲ್ಲ. ಅದು ಮನಸ್ಸಿನ ಭಾವನೆ. ಇದು ಮನಸ್ಸಿನ ಮೂಲವನ್ನು ಶೋಧನೆ ಮಾಡಿದಾಗ ಎಲ್ಲವು ತಿಳಿದು ಬರ್ತದೆ. ನಯಾ ಪೈಸೆ ಖರ್ಚಿಲ್ಲ., ಜನರ ಸಹಕಾರ ಬೇಡ, ಧ್ಯಾನ ಮಾಡ್ಲಿಕ್ಕೆ ಕಣ್ಣೂ ಮುಚ್ಚಿಕೊಳ್ಳೋದು ಬ್ಯಾಡಪ್ಪ. ಬಹಳ ಹೆದ್ರಿಕೆ ಆಕ್ತದೆ. ಆ್ಞಂ. ಕಣ್ಣು ಬಿಟ್ಟು ಧ್ಯಾನ ಮಾಡಿ. ಆ್ಞಂ. ಹೆಚ್ಚಿನ ವಿವರ ಏನಾದ್ರು ಇದ್ರೆ ಮುಂದೆ ನೋಡುವ.

*****